# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 671(758) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12.12.2023 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2022-23ನೇ ಸಾಲಿನಲ್ಲಿ ಕೆ.ಐ.ಎ.ಡಿ.ಬಿ ಧಾರವಾಡ ವಲಯ ಕಛೇರಿ ವ್ಯಾಪ್ತಿಯಲ್ಲಿ ಸ್ವಾಧೀನ ಪಡಿಸಿಕೊಂಡ ಜಮೀನುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಎರಡು ಬಾರಿ ಪರಿಹಾರ ನೀಡಿರುವುದು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಪರಿಹಾರ ನೀಡಿರುವುದು. ಖಾತೆದಾರರಿಗೆ ಬದಲಾಗಿ ಇತರರಿಗೆ ಪರಿಹಾರ ನೀಡಿರುವುದು ಹಾಗೂ ನಿಯಮ ಪಾಲಿಸದೆ ಪರಿಹಾರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು) | ಹೌದು.<br>ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ ವಲಯ ಕಛೇರಿ, ಧಾರವಾಡ ಇವರ ವ್ಯಾಪ್ತಿಗೆ ಒಳಪಡುವ ಕೆಲಗೇರಿ, ಮಮ್ಮಿಗಟ್ಟಿ ಮತ್ತು ಕೊಟ್ಟೂರು ಗ್ರಾಮಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಪೈಕಿ ಕೆಲಗೇರಿ ಗ್ರಾಮದ ಸರ್ವೆ ನಂ. 731/2, 707, 720, 711, 708, 714, 718, 709 ಮಮ್ಮಿಗಟ್ಟಿ ಗ್ರಾಮದ ಸರ್ವೆ ನಂ. 150 ಮತ್ತು ಕೊಟ್ಟೂರು ಗ್ರಾಮದ ಸರ್ವೆ ನಂ. 635 ರಲ್ಲಿನ ಜಮೀನುಗಳಿಗೆ ಒಟ್ಟು ರೂ. 19,99,55,000/- ಗಳ ಪರಿಹಾರದ ಹಣವನ್ನು ಎರಡು ಬಾರಿ ಅಕ್ರಮವಾಗಿ ಪಾವತಿಸಿರುವುದಾಗಿ ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳಿಂದ ದೂರುಗಳು ಸ್ವೀಕೃತವಾಗಿರುತ್ತವೆ. ಸದರಿ ದೂರುಗಳ ಹಿನ್ನೆಲೆಯಲ್ಲಿ ಪ್ರಸ್ತಾವಿತ ಪ್ರಕರಣಗಳ ಸಮಗ್ರ ಪರಿಶೀಲನೆ/ತನಿಖೆ ನಡೆಸುವ ಸಲುವಾಗಿ ವಿಶೇಷ ಜಿಲ್ಲಾಧಿಕಾರಿ, (ಬಿಎಂಐಸಿಪಿ ಮತ್ತು ಮೆಟ್ರೋ) ಕೆಐಎಡಿಬಿ ನೇತೃತ್ವದಲ್ಲಿ ಹಿರಿಯ ಅಧಿಕಾರಿ ಮತ್ತು ಸಿಬ್ಬಂದಿಗಳನ್ನೊಳಗೊಂಡ ತಂಡವೊಂದನ್ನು ರಚಿಸಲಾಗಿತ್ತು. ಸದರಿ ತಂಡವು ದಿನಾಂಕ: 14-12-2022 & 19-12-2022 ರಂದು ತನಿಖಾ ವರದಿಗಳನ್ನು ನೀಡಿರುತ್ತದೆ.<br>ಈ ಹಿಂದಿನ ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ ವಲಯ ಕಛೇರಿ, ಧಾರವಾಢ ಮತ್ತು ಇತರೆ ಸಿಬ್ಬಂದಿಗಳು ಮಮ್ಮಿಗಟ್ಟಿ, ಕೆಲಗೇರಿ, ಕೊಟ್ಟೂರು ಹಾಗೂ ಇತರೆ ಗ್ರಾಮಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಕೆಲವು ಸರ್ವೆ ನಂಬರ್‌ಗಳಲ್ಲಿನ ಜಮೀನಿಗೆ ಪರಿಹಾರ ಪಾವತಿಸುವಲ್ಲಿ ಅಗತ್ಯ ನಿಯಮಗಳನ್ನು ಪಾಲಿಸದೇ ಕರ್ತವ್ಯ ಲೋಪವೆಸಗಿ ಮಂಡಳಿಗೆ ವಂಚಿಸಿ, ಒಟ್ಟು ರೂ. 19,99,55,000/- ಗಳ ಆರ್ಥಿಕ ನಷ್ಟ ಉಂಟು ಮಾಡಿರುವುದಾಗಿ ವರದಿ ನೀಡಿರುತ್ತಾರೆ. |

| | | |
|---|---|---|
| ಆ | ಈ ಸಂಬಂಧ ತನಿಖೆ ನಡೆಸಿ ದಿನಾಂಕ:14-12-2022 ಮತ್ತು 19-12-2022 ರಂದು ತನಿಖಾ ವರದಿ ಸಲ್ಲಿಸಲಾಗಿದೆಯೇ; ತನಿಖಾ ವರದಿ ಸ್ವೀಕೃತವಾಗಿದೆಯೇ; (ವಿವರ ನೀಡುವುದು) | ಸದರಿ ವರದಿಯನ್ವಯ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು, ಧಾರವಾಢ ಇವರಿಗೆ ದಿನಾಂಕ: 19.12.2022 ರಂದು ಸದರಿ ಪ್ರಕರಣದಲ್ಲಿ ಮಂಡಳಿಗೆ ಆರ್ಥಿಕ ನಷ್ಟ ಉಂಟು ಮಾಡಿರುವ ಶ್ರೀ. ವಿ.ಡಿ. ಸಜ್ಜನ್, ವಿಶೇಷ ಭೂಸ್ವಾಧೀನಾಧಿಕಾರಿ (ನಿವೃತ್ತ), ಶ್ರೀ. ಎಂ.ಕೆ. ಶಿಂಪಿ, ವ್ಯವಸ್ಥಾಪಕರು, ಶ್ರೀ. ಶಂಕರ್ ವೈ ತಳವಾರ್, ಹಿರಿಯ ಸಹಾಯಕ, ಶ್ರೀ. ಹೇಮಚಂದ್ರ ಬ. ಚಿಂತಾಮಣಿ, ನಿವೃತ್ತ ಶಿರಸ್ತೇದಾರ್ ಮತ್ತು ಇತರೆ ಬ್ಯಾಂಕ್ ಸಿಬ್ಬಂದಿಗಳು ಈ ಪ್ರಕರಣದಲ್ಲಿ ಶಾಮೀಲಾಗಿರುವ ಸಾಧ್ಯತೆ ಇರುವುದರಿಂದ, ಸದರಿಯವರ ವಿರುದ್ಧ ಮತ್ತು 2ನೇ ಬಾರಿ ಭೂ ಪರಿಹಾರ ಪಡೆದ 10 ಜನ ಭೂ ಮಾಲೀಕರುಗಳ ವಿರುದ್ಧ ಸಂಬಂಧಪಟ್ಟ ಪೋಲೀಸ್ ಠಾಣೆಯಲ್ಲಿ ಕೂಡಲೇ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಸೂಚಿಸಲಾಗಿರುತ್ತದೆ.<br>ಭೂಸ್ವಾಧೀನಾಧಿಕಾರಿಗಳು, ಧಾರವಾಡ ಇವರು ನೀಡಿದ ಪೀರ್ಯಾದಿ ಯನ್ವಯ ಶ್ರೀ. ವಿ.ಡಿ. ಸಜ್ಜನ್ ಮತ್ತು ಇತರರ ವಿರುದ್ಧ ವಿದ್ಯಾಗಿರಿ ಪೋಲೀಸ್ ಠಾಣೆ, ಧಾರವಾಡ ಇಲ್ಲಿ ಎಫ್.ಐ.ಆರ್ ಸಂಖ್ಯೆ: 0251/2022 ಕಲಂ 406, 409, 419, 420, 465, 467, 468, 471, 201 ಸಹ ಕಲಂ 34 ಐಪಿಸಿ ರನ್ವಯ ದಿನಾಂಕ:20-12-2022 ರಂದು ಕ್ರಿಮಿನಲ್ ಮೊಕದ್ದಮ್ಮೆ ದಾಖಲಿಸಿಲಾಗಿರುತ್ತದೆ.<br>ಅಲ್ಲದೇ, ಶ್ರೀ. ಎಂ.ಕೆ. ಶಿಂಪಿ, ವ್ಯವಸ್ಥಾಪಕರು ಹಾಗೂ ಶ್ರೀ. ಶಂಕರ್ ವೈ ತಳವಾರ್, ಹಿರಿಯ ಸಹಾಯಕರು ಇವರುಗಳನ್ನು ದಿನಾಂಕ: 19-12-2022 ರಂದು ಸೇವೆಯಿಂದ ಅಮಾನತ್ತು ಗೊಳಿಸಲಾಗಿದೆ.<br>ಮುಂದುವರೆದು, ಸದರಿ ಪ್ರಕರಣದ ತನಿಖೆಯನ್ನು ಸಿ.ಐ.ಡಿ ಘಟಕ, ಧಾರವಾಡ ಇವರು ಕೈಗೊಂಡಿದ್ದು, ಪೊಲೀಸ್ ಇನ್‌ಸ್ಪೆಕ್ಟರ್ ಸಿ.ಐ.ಎ.ಇ ಘಟಕ ಧಾರವಾಡ ಇವರು ತನಿಖೆ ಪೂರ್ಣ ಗೊಳಿಸಿ, ಆರೋಪಿತರ ವಿರುದ್ದ ಕಲಂ 120(ಬಿ), 406, 409, 419, 420, 465, 467, 468, 471, 201, 204 ಸಹ ಕಲಂ 34 & 35 ಐಪಿಸಿ ರನ್ವಯ ದೋಷಾರೋಪಣ ಪತ್ರವನ್ನು ಒಟ್ಟು 20 ಜನರ ಆರೋಪಿತರ ವಿರುದ್ದ ಮಾನ್ಯ 3ನೇ ಅಧಿಕ ಸಿಜೆ ಮತ್ತು ಸಿಜೆಮ್ ನ್ಯಾಯಾಲಯ ಧಾರವಾಡ ಇವರಿಗೆ ಸಲ್ಲಿಸಿದ್ದು, ಕ್ರಿಮಿನಲ್ ಮೊಕದ್ದಮೆ ಸಂಖ್ಯೆ ಸಿ.ಸಿ 1072/2023 ದಾಖಲಿಸಿರುತ್ತದೆ.<br>ಆರೋಪಿ ನಂ:1)ಎ-1 ವಿ.ಡಿ. ಸಜ್ಜನ್, ನಿವೃತ್ತ ಎಸ್.ಎಲ್.ಒ, ಕೆ.ಐ.ಎ.ಡಿ.ಬಿ ಕಛೇರಿ, ಧಾರವಾಡ,<br>2)ಎ-3 ಶಂಕರ.ವಾಯ್. ತಳವಾರ, ಹಿರಿಯ ಸಹಾಯಕ, ಕೆ.ಐ.ಎ.ಡಿ.ಬಿ ಕಛೇರಿ, ಧಾರವಾಡ ಲಕಮನಹಳ್ಳಿ, |
| ಇ | ಕಳೆದ ಅಧಿವೇಶನದಲ್ಲಿ ಸರ್ಕಾರವು ಭರವಸೆ ನೀಡಿದಂತೆ ವರದಿಯ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರದೊಂದಿಗೆ ಮಾಹಿತಿ ನೀಡುವುದು) | |

| | | |
|---|---|---|
| | | 3)ಎ-4 ಹೇಮಚಂದ್ರ. ಬಿ.ಚಿಂತಾಮಣಿ ಗುತ್ತಿಗೆ ನೌಕರ ಕೆ.ಐ.ಎ.ಡಿ.ಬಿ ಜೋನಲ್ ಆಫೀಸ್ ಧಾರವಾಡ,<br>4)ಎ-8 ಬಸಪ್ಪ ನಾಗಪ್ಪ ಶಿರೂರ ಸಾ: ಧಾರವಾಡ,<br>5)ಎ-17 ನಾಗನಗೌಡ ವೀರಣಗೌಡ ಭರಮಗೌಡರ, ಸಾ\|\| ಕಬ್ಬೇನೂರ,<br>6)ಎ-18 ಮೈಬೂಬ @ ಅಸ್ಪಕ ತಂದೆ ಅಲಾಭಕ್ಷ ದುಂಡಸಿ, ಸಾ\|\| ಹುಬ್ಬಳ್ಳಿ.<br>ಮೇಲ್ಕಾಣಿಸಿದ ಆರೋಪಿತರು ದಸ್ತಗೀರಾಗಿ ಬಂಧನದಲ್ಲಿರುವ ಬಗ್ಗೆ ತನಿಖಾಧಿಕಾರಿಗಳು ತಮ್ಮ ಅಂತಿಮ ವರದಿಯಲ್ಲಿ ತಿಳಿಸಿರುತ್ತಾರೆ.<br>ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. |
| ಈ | ತನಿಖಾ ವರದಿಯಲ್ಲಿ ಎಷ್ಟು ಮಂದಿ ಅಧಿಕಾರಿ/ ನೌಕರರ ಮೇಲೆ ಆರೋಪಗಳನ್ನು ಹೊರಿಸಲಾಗಿದೆ; (ಅಧಿಕಾರಿ/ ನೌಕರರ ಪೂರ್ಣ ವಿವರಗಳನ್ನು ನೀಡುವುದು) | ಸದರಿ ತನಿಖಾ ವರದಿಯಲ್ಲಿ ಪ್ರಸ್ತಾಪಿಸಿರುವ ಅಧಿಕಾರಿ/ನೌಕರರ ವಿವರಗಳು ಕೆಳಕಂಡಂತಿವೆ:<br>1.ಶ್ರೀ. ವಿ.ಡಿ. ಸಜ್ಜನ್, ವಿಶೇಷ ಭೂಸ್ವಾಧೀನಾಧಿಕಾರಿ (ನಿವೃತ್ತ), ಕೆಐಎಡಿಬಿ ವಲಯ ಕಛೇರಿ, ಧಾರವಾಡ.<br>2.ಶ್ರೀ. ಎಂ.ಕೆ. ಶಿಂಪಿ, ವ್ಯವಸ್ಥಾಪಕರು, ಕೆಐಎಡಿಬಿ ವಲಯ ಕಛೇರಿ, ಧಾರವಾಡ.<br>3.ಶ್ರೀ. ಶಂಕರ್ ವೈ ತಳವಾರ್, ಹಿರಿಯ ಸಹಾಯಕ, ಕೆಐಎಡಿಬಿ ವಲಯ ಕಛೇರಿ, ದಾವಣಗೆರೆ.<br>4.ಶ್ರೀ. ಹೇಮಚಂದ್ರ ಬ. ಚಿಂತಾಮಣಿ, ನಿವೃತ್ತ ಶಿರಸ್ತೇದಾರ್, ಕೆಐಎಡಿಬಿ ವಲಯ ಕಛೇರಿ, ಧಾರವಾಡ.<br>ಮೇಲ್ಕಾಣಿಸಿದ 4 ಜನ ಆರೋಪಿತರು ಅಧಿಕಾರಿ/ನೌಕರರು (ನಿವೃತ್ತ) ಇದ್ದು, ಸದರಿಯವರ ವಿರುದ್ದ, ಕಲಂ 120(ಬಿ), 406, 409, 419, 420, 465, 467, 468, 471, 201, 204 ಸಹ ಕಲಂ 34 & 35 ಐಪಿಸಿ ರನ್ವಯ ದೋಷಾರೋಪಣ ಪತ್ರವನ್ನು ಒಟ್ಟು 20 ಜನರ ಆರೋಪಿತರ ವಿರುದ್ದ ಮಾನ್ಯ 3ನೇ ಅಧಿಕ ಸಿಜೆ ಮತ್ತು ಸಿಜೆಎಂ ನ್ಯಾಯಾಲಯ ಧಾರವಾಡ ಇವರಿಗೆ ಸಲ್ಲಿಸಿದ್ದು, ಕ್ರಿಮಿನಲ್ ಮೊಕದ್ದಮೆ ಸಂಖ್ಯೆ ಸಿ.ಸಿ 1072/2023ನ್ನು ದಾಖಲಿಸಿರುತ್ತದೆ. |
| ಉ | ಭಾಗಿಯಾದ ಅಧಿಕಾರಿ/ನೌಕರರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ? (ಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು) | 1. ಶ್ರೀ. ವಿ.ಡಿ. ಸಜ್ಜನ್, ವಿಶೇಷ ಭೂಸ್ವಾಧೀನಾಧಿಕಾರಿ (ನಿವೃತ್ತ), ಕೆಐಎಡಿಬಿ ವಲಯ ಕಛೇರಿ, ಧಾರವಾಡ.<br>2. ಶ್ರೀ. ಎಂ.ಕೆ. ಶಿಂಪಿ, ವ್ಯವಸ್ಥಾಪಕರು, ಕೆಐಎಡಿಬಿ ವಲಯ ಕಛೇರಿ, ಧಾರವಾಡ. |

| | | |
|---|---|---|
| | | 3. ಶ್ರೀ. ಶಂಕರ್ ವೈ ತಳವಾರ್, ಹಿರಿಯ ಸಹಾಯಕ, ಕೆಐಎಡಿಬಿ ವಲಯ ಕಛೇರಿ, ದಾವಣಗೆರೆ.<br>4. ಶ್ರೀ. ಹೇಮಚಂದ್ರ ಬ. ಚಿಂತಾಮಣಿ, ನಿವೃತ್ತ ಶಿರಸ್ತೇದಾರ್, ಕೆಐಎಡಿಬಿ ವಲಯ ಕಛೇರಿ, ಧಾರವಾಡ.<br><br>ಮೇಲ್ಕಾಣಿಸಿದ 1 ಮತ್ತು 4 ನೇ ಯವರು ನಿವೃತ್ತರಾಗಿದ್ದು, 2 ಮತ್ತು 3ನೇ ಯವರನ್ನು ದಿನಾಂಕ: 19.12.2022 ರಂದು ಸೇವೆಯಿಂದ ಅಮಾನತ್ತು ಗೊಳಿಸಲಾಗಿದೆ. |

ಸಂಖ್ಯೆ: ಸಿಐ 334 ಐಎಪಿ 2023

(ಎಂ.ಬಿ. ಪಾಟೀಲ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ

ಮೂಲಸೌಲಭ್ಯ ಅಭಿವೃದ್ಧಿ ಸಚಿವರು.